# <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ</u>

<u>ಸಿ.ಸಿ. ನಂ.31/2017</u>

PW-2

| | | |
|---|---|---|
| ಹೆಸರು | :- | ಕೆ.ಎನ್.ಏಕಾಂಭರೇಶ್ವರ |
| ತಂದೆ ಹೆಸರು | :- | ಲೇಟ್ ಕೆ.ನಾಗರಾಜು |
| ವಯಸ್ಸು | :- | 51 ವರ್ಷ |
| ವೃತ್ತಿ | :- | ಎ.ಎಸ್.ಐ., ಬಿಡದಿ ಪೊಲೀಸ್ ಠಾಣೆ |
| ವಾಸ ಸ್ಥಳ | :- | ಬಿಡದಿ |
| ದಿನಾಂಕ | :- | 19.12.2024. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-</u>

ನಾನು 4 ವರ್ಷಗಳಿಂದ ಬಿಡದಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 27.08.2022 ರಂದು ಪಿ.ಎಸ್.ಐ ರವರ ಆದೇಶದಂತೆ ಸಿ.ಸಿ.31/2017 ರಲ್ಲಿ ಆರೋಪಿ ಇಬ್ರಾಹಿಂ ರವರ ವಿರುದ್ಧ ಉದ್ಘೋಷಣೆ ಹೊರಡಿಸಿದ್ದು ಅದರ ಸಂಬಂಧ ಬೆಂಗಳೂರಿನ ಜೆ.ಜೆ.ನಗರ, ಗೋರಿಪಾಳ್ಯದ ಜಾಮಿಯಾ ಮಸೀದಿ ಬಳಿ ಆರೋಪಿಯ ವಿಳಾಸ 1 ನೇ ಕ್ರಾಸ್, ಜಾಮಿಯಾ ಮಸೀದಿಯ ಪಕ್ಕದಲ್ಲಿ 1 ನೇ ಆರೋಪಿಯ ಮನೆಯ ಬಳಿ ಆರೋಪಿಯ ಬಗ್ಗೆ ವಿಚಾರ ಮಾಡಲಾಗಿ ಆ ವಿಳಾಸದಲ್ಲಿ ಆರೋಪಿ ಇಲ್ಲ, ಆ ಮನೆ ಸಂಖ್ಯೆ ಸಹ ಇಲ್ಲ ಎಂದು ತಿಳಿಸಿದರು. ನಂತರ ಪಂಚರನ್ನು ಬರಮಾಡಿಕೊಂಡು ಮಹಜರ್ ಮಾಡಿ, ಟಾಂ ಟಾಂ

ಮಾಡಿಸಿ ಉದ್ಘೋಷಣೆ ಪ್ರತಿಯನ್ನು ಜಾಮಿಯಾ ಮಸೀದಿ ಗೋಡೆಗೆ ಅಂಟಿಸಿ, ಸಾರ್ವಜನಿಕರಿಗೆ ತಿಳಿಸಿ 10.30 ರಿಂದ 11.00 ಗಂಟೆಗೆ ಮಹಜರ್ ಕ್ರಮ ಕೈಗೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ನಿಪಿ-4 ಎಂದು, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಿರುತ್ತೇನೆ.

3. ದಿನಾಂಕ 28.08.2022 ರಂದು ಬೆಂಗಳೂರಿನ ಉತ್ತರಹಳ್ಳಿ ಹೋಬಳಿಯ ಬಿ.ಡಿ.ಎ ಆವಲಹಳ್ಳಿ ಕ್ವಾಟ್ರಸ್ ಸರ್ಕಲ್ ಬಳಿ ತೆರಳಿ ಆರೋಪಿ ಫೈಯಾಜ್ ಪಾಷಾನ ಬಗ್ಗೆ ವಿಚಾರ ಮಾಡಿ ಅಲ್ಲಿ ಗ್ರಾಮಸ್ಥರು ಆತನು ಇಲ್ಲ, ಮನೆ ನಂಬರ್ ಇಲ್ಲ ಎಂದು ತಿಳಿಸಿದರು. ನಂತರ ಅಲ್ಲಿಮಹಜರ್ ಮಾಡಿ ಟಾಂ ಟಾಂ ಮಾಡಿಸಿ, ಉದ್ಘೋಷಣಾ ಪ್ರತಿಯನ್ನು ಬಸ್ ನಿಲ್ದಾಣದ ಗೋಡೆಗೆ ಅಂಟಿಸಿ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರ್ ಮಾಡಿದೆ. ಮಹಜರನ್ನು ಈಗ ನಿಪಿ-5 ಎಂದು, ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಿರುತ್ತೇನೆ. ನಂತರ ಸಂಬಂಧಪಟ್ಟ ಬಿ.ಬಿ.ಎಂ.ಪಿ ಕಛೇರಿಗೆ ಆರೋಪಿತರ ಸ್ಥಿರಾಸ್ತಿ ಬಗ್ಗೆ ವಿವರ ಕೇಳಿ ಮನವಿ ಕೊಟ್ಟೆ. ಮನವಿಗಳನ್ನು ಈಗ ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಿರುತ್ತೇನೆ.

4. ದಿನಾಂಕ 15.05.2023 ರಂದು 1 ನೇ ಆರೋಪಿಗೆ ಸಂಬಂಧಿಸಿದಂತೆ ಅವರ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಇರುವುದಿಲ್ಲ ಎಂದು ಬಿ.ಬಿ.ಎಂ.ಪಿ ಅಧಿಕಾರಿಗಳು ವರದಿ ನೀಡಿರುತ್ತಾರೆ. ದಿನಾಂಕ 06.06.2023 ರಂದು 2 ನೇ ಆರೋಪಿಗೆ ಸಂಬಂಧಿಸಿದಂತೆ ಆತನ ಹೆಸರಿನಲ್ಲಿ ಯಾವುದೇ ಸ್ಥಿರಾಸ್ತಿ ಇರುವುದಿಲ್ಲ ಎಂದು ಬಿ.ಬಿ.ಎಂ.ಪಿ ಅಧಿಕಾರಿಗಳು

ವರದಿ ನೀಡಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಿರುತ್ತೇನೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.